# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 20/2017**

**ದೋ.ಸಾ. :02 ಪ್ರಾ.ಸಾ. : 01**

| | | |
|---|---|---|
| ಸಾಕ್ಷಿಯ ಹೆಸರು | : | ರಾಮಚಂದ್ರ ವೆಂಕಟ್ರಮಣ ನಾಯಕ |
| ತಂದೆಯ ಹೆಸರು | : | ವೆಂಕಟ್ರಮಣ ನಾಯಕ |
| ವಯಸ್ಸು | : | 60 ವರ್ಷ |
| ಕೆಲಸ | : | ರೈತಾಪಿ |
| ವಾಸ | : | ಬಾವಿಕೇರಿ, ತಾಃ ಅಂಕೋಲಾ |

**ದಿನಾಂಕಃ 18-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**(ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ)**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 25-01-2017 ರಂದು ಪೋಲಿಸರು ಅಂಕೋಲಾ ತಾಲೂಕ ಬಾವಿಕೇರಿಯ ತೆಪ್ಪದಕೇರಿಯಲ್ಲಿರುವ ಚಾಸಾ-7 ರವರ ಮನೆಗೆ ಪಂಚನಾಮೆಗಾಗಿ ಕರೆಸಿದ್ದರು. ಅಲ್ಲಿ ಚಾಸಾ-1 ರವರು ಹಾಜರಿದ್ದು, ಆರೋಪಿ ತನ್ನ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ, ನನ್ನನ್ನು ಬೆಡ್ ರೂಮ್ ಒಳಗಡೆ ಎಳೆದುಕೊಂಡು ಹೋಗಿ, ಲೈಂಗಿಕವಾಗಿ ಬಲಾತ್ಕರಿಸಲು ಪ್ರಯತ್ನಪಟ್ಟ ಸ್ಥಳ ಎಂದು ತೋರಿಸಿದ ಮೇರೆಗೆ, ಅಲ್ಲಿ ಪೋಲಿಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿ, ಬೆಳಿಗ್ಗೆ 09-30 ರಿಂದ 10-30 ರ ವರೆಗೆ ಪಂಚನಾಮೆ ಮಾಡಿ, ನಕಾಶೆ ತಯಾರಿಸಿ, ಪೋಟೋ ತೆಗೆದರು ಹಾಗೂ ಪಂಚನಾಮೆ ಮತ್ತು ನಕಾಶೆ ನನ್ನ ಸಹಿಯನ್ನು ಪಡೆದುಕೊಂಡರು. ಸಾಕ್ಷಿಯು ಪಂಚನಾಮೆ ಹಾಗೂ ನಕಾಶೆಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು, ನಕಾಶೆಯನ್ನು ನಿಪಿ-2 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 5 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು

ನಿಪಿ–3 ರಿಂದ 7 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ತಾನು ಇರುವುದಾಗಿ ನೋಡಿ ಗುರುತಿಸಿರುತ್ತಾರೆ.

2. ಅದೇ ದಿನ ಬೆಳಿಗ್ಗೆ 11–00 ಗಂಟೆ ಸಮಯದಲ್ಲಿ ಚಾಸಾ–4 ರವರು ಆರೋಪಿ ಚಾಸಾ–7 ರವರ ಮನೆಯನ್ನು ಅಕ್ರಮ ಪ್ರವೇಶ ಮಾಡಿ, ಚಾಸಾ–1 ರವರ ಜೊತೆ ಲೈಂಗಿಕ ಬಲತ್ಕಾರ ಮಾಡಲು ಪ್ರಯತ್ನಪಟ್ಟ ಸಮಯದಲ್ಲಿ ಆತನ ಮೊಬೈಲ್ ನ್ನು ಚಾಸಾ–7 ರವರ ಮನೆಯ ಬೆಡ್ ರೂಮ್ ನಲ್ಲಿ ಬಿಟ್ಟು ಹೋಗಿರುವುದನ್ನು ತೋರಿಸಿದ್ದು, ಪೋಲಿಸರು ನಮ್ಮ ಸಮಕ್ಷಮ ಸದರಿ ಮೊಬೈಲ್ ನ್ನು ಜಪ್ತಪಡಿಸಿಕೊಂಡರು ಹಾಗೂ ಪೋಟೋಗಳನ್ನು ತಗೆದಿರುತ್ತಾರೆ. ಚಾಸಾ–4 ರವರು ತೋರಿಸಿದ ಮೊಬೈಲ್ ವಿವೋ ಕಂಪನಿಯದ್ದಾಗಿರುತ್ತದೆ. ಪೋಲಿಸರು ಜಪ್ತಪಂಚನಾಮೆಯನ್ನು ಬೆಳಿಗ್ಗೆ 11–00 ರಿಂದ 11–45 ರ ವರಗೆ ಮಾಡಿ, ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಜಪ್ತ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ಜಪ್ತ ಪಂಚನಾಮೆಯ ಕಾಲಕ್ಕೆ ತೆಗೆದ 3 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ–9 ರಿಂದ ನಿಪಿ–11 ಎಂದು ಗುರುತಿಸಲಾಯಿತು. ಜಪ್ತ ಪಂಚನಾಮೆಯ ಕಾಲದಲ್ಲಿ ಜಪ್ತಪಡಿಸಿಕೊಂಡ ಮೊಬೈಲ್ ನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು–1 ಎಂದು ಗುರುತಿಸಲಾಯಿತು.

3. ದಿಃ 10–02–2017 ರಂದು ಅಂಕೋಲಾ ಪೋಲಿಸರು ನನ್ನನ್ನು ಪಂಚನಾಮೆಗೆ ಬರುವಂತೆ ಪೋಲಿಸ್ ಠಾಣೆಗೆ ಕರೆಸಿದ್ದರು. ಅಲ್ಲಿ ಚಾಸಾ–1 ರವರ ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ವಸ್ತುಗಳನ್ನು ಮಹಿಳಾ ಪೋಲಿಸರು ತಂದು ಹಾಜರಪಡಿಸಿದ್ದು, ಅವುಗಳನ್ನು ನನ್ನ ಹಾಗೂ ಚಾಸಾ–3 ರವರ ಸಮಕ್ಷಮ, ಬೆಳಿಗ್ಗೆ 10–30 ರಿಂದ 11–30 ರ ವರೆಗೆ ಜಪ್ತ ಪಂಚನಾಮೆಯಡಿ ಜಪ್ತಪಡಿಸಿಕೊಂಡರು ಹಾಗೂ ನನ್ನ ಸಹಿಯನ್ನು ಪಡೆದುಕೊಂಡರು. ಜಪ್ತ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–12 ಎಂದು, ಸಾಕ್ಷಿಯ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರು ಆರೋಪಿತನ ವೈದ್ಯಕೀಯ ಪರೀಕ್ಷೆಯ ಕಾಲಕ್ಕೆ ಸಂಗ್ರಹಿಸಿದ ವಸ್ತುಗಳನ್ನು ಪೋಲಿಸರು ತಂದು ಹಾಜರಪಡಿಸಿದ್ದು, ಅವುಗಳನ್ನು ನನ್ನ ಹಾಗೂ ಚಾಸಾ–3 ರವರ ಸಮಕ್ಷಮ, ಮದ್ಯಾಹ್ನ 12–00 ರಿಂದ 12–45 ರ ವರೆಗೆ ಜಪ್ತ ಪಂಚನಾಮೆಯಡಿ ಜಪ್ತಪಡಿಸಿಕೊಂಡರು ಹಾಗೂ ನನ್ನ

ಸಹಿಯನ್ನು ಪಡೆದುಕೊಂಡರು. ಜಪ್ತು ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ– 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ– 13(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ